ಅಪರ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

**ಸಿ.ಸಿ. ಸಂಖ್ಯೆ: 530/2020**

ಫಿರ್ಯಾದಿದಾರ : ಶ್ರೀ ಪುಟ್ಟಣ್ಣ ಬಿನ್ ಲೇಟ್ ಹಲಗಪ್ಪ,
ವಯಸ್ಸು ಸುಮಾರು 55 ವರ್ಷಗಳು,
ವಾಸಃ ಈರಪ್ಪನಕೊಪ್ಪಲು ಗ್ರಾಮ,
ಇಲವಾಲ ಹೋಬಳಿ, ಮೈಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

ವಿರುದ್ಧ,

ಆರೋಪಿ/ಗಳು : ಮಹಾದೇವ ಬಿನ್ ಲೇಟ್ ಕಾಳೇಗೌಡ,
ವಯಸ್ಸು ಸುಮಾರು 50 ವರ್ಷಗಳು,
ವಾಸಃ ಶ್ರವಣಹಳ್ಳಿ ಗ್ರಾಮ,
ಶ್ಯಾನುಭೋಗನಹಳ್ಳಿ ಅಂಚೆ,
ಬಿಳಿಕೆರೆ ಹೋಬಳಿ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

**ಆಪಾದನೆ**

ಆರೋಪಿಯಾದ ನೀವು, ಫಿರ್ಯಾದುದಾರರಿಂದ ನಿಮ್ಮ ದರದ್ದು ನಿಮಿತ್ತ ಅಂದರೆ ಮನೆ ಕಟ್ಟಲು ಮತ್ತು ಕೃಷಿ ವೆಚ್ಚಕ್ಕಾಗಿ ದಿನಾಂಕಃ 20-02-2020 ರಂದು ರೂ.2,00,000/- ಹಣವನ್ನು ಸಾಲವಾಗಿ ಪಡೆದು ಮತ್ತು ಸದರಿ ಸಾಲದ ಹಣವನ್ನು ಮರುಪಾವತಿಸಲು, 11.05.2020 ರ ದಿನಾಂಕ ಇರುವ ರೂ.2,00,000/-ರ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಹುಣಸೂರು ಶಾಖೆಯ ಚೆಕ್ ಸಂಖ್ಯೆ - 974335 ಅನ್ನು ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ದಿಃ 11-05-2020 ರಂದು ತಮ್ಮ ಬ್ಯಾಂಕ್ ಖಾತೆ ಇರುವ ಮೈಸೂರಿನ ಪಿ.ಕೆ.ಜಿ.ಬಿ., ಇಲವಾಲ ಶಾಖೆಗೆ ನಗಧೀಕರಣಕ್ಕಾಗಿ ಹಾಜರುಪಡಿಸಿದಾಗ, ಸದರಿ ಚೆಕ್ಕು ದಯವಿಟ್ಟು ಮತ್ತೊಮ್ಮೆ ಹಾಜರುಪಡಿಸಿ **" Please Present Again"** ಎಂಬ ಹಿಂಬರಹದೊಂದಿಗೆ ಮಾನ್ಯವಾಗದೆ ವಾಪಸ್ಸಾಗಿರುತ್ತದೆ. ನಂತರ ಫಿರ್ಯಾದುದಾರರು ಮತ್ತೊಮ್ಮೆ ಸದರಿ ಚೆಕ್ಕನ್ನು ನಗಧಿಕರಣಕ್ಕಾಗಿ ಹಾಜರುಪಡಿಸಿದಾಗಲೂ ಸಹ ದಯವಿಟ್ಟು ಮತ್ತೊಮ್ಮೆ ಹಾಜರುಪಡಿಸಿ ಎಂಬ ಹಿಂಬರಹದೊಂದಿಗೆ ಮಾನ್ಯವಾಗದೆ ವಾಪಸ್ಸಾಗಿರುತ್ತದೆ. ಆದ್ದರಿಂದ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ 13.06.2020 ರಂದು ನೊಂದಾಯಿತ ಅಂಚೆ ಮೂಲಕ ನೊಟೀಸನ್ನು ಕಳುಹಿಸಿದ್ದು, ಸದರಿ ನೋಟೀಸ್ ನಿಮಗೆ ದಿಃ 18-06-2020 ರಂದು ಜಾರಿಯಾಗಿದ್ದರೂ ಸಹ ನೀವು ಇದುವರೆವಿಗೂ ಫಿರ್ಯಾದುದಾರರಿಗೆ ಚೆಕ್ಕಿನಲ್ಲಿ ನಮೂದಿಸಿದ ಹಣವನ್ನಾಗಲೀ ಅಥವಾ ಸದರಿ ನೋಟೀಸಿಗೆ ಪ್ರತ್ಯುತ್ತರವನ್ನಾಗಲೀ ನೀಡಿರುವುದಿಲ್ಲ. ಆದಕಾರಣ ನೀವು ಎನ್.ಐ ಆ್ಯಕ್ಟ್ ಕಲಂ **138** ರಂತೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

ಮೇಲ್ಕಂಡ ಅಪರಾದವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ, ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡುತ್ತೀರಿ.

ಪ್ರಶ್ನೆ **1.** ಇದೀಗ ಓದಿ ವಿವರಿಸಿದ ಆಪಾದನೆ ನಿಮಗೆ ಅರ್ಥವಾಯಿತೆ**?**

ಉತ್ತರಃ

ಪ್ರಶ್ನೆ **2.** ಈ ಆಪಾದನೆಯ ಬಗ್ಗೆ ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ
ಯಾವುದಾದರೂ ಪ್ರತಿ ರಕ್ಷಣೆ ಇದೆಯೇ**?**

ಉತ್ತರಃ

ದಿಃ **06.08.2022**

(ಪೂಜಾ ಬೆಳಕೇರಿ)
ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ದಂಡಾಧಿಕಾರಿಗಳು, ಹುಣಸೂರು.